ಚುರುಕಾಗುತ್ತಿದ್ದುದರಿಂದ ಎಡವಟ್ಟಾಯಿತು, ಫೋನ್ ಡೆಡ್ ಆಯ್ತು ಎನ್ನುವ ನ್ಯೂಸನ್ನು ಕಿವಿಗೊಟ್ಟು ಕೇಳಿದೆ. 'ಒಂದು ಮಾಡಕ್ ಹೋಗಿ ಮತ್ತೊಂದ್ ಮಾಡಿದ್ರಂತೆ' ಎಂಬ ಗಾದೆ ಮಾತಿನಂತೆ ಲೋಕೋಪಯೋಗಿ ಇಲಾಖೆ ರಾಜ್ಯ ಹೆದ್ದಾರಿಯ ಮೇಲೆ ತೆರೆದುಕೊಂಡಿದ್ದ ಮ್ಯಾನ್‌ಹೋಲ್ ಮುಚ್ಚಲು ಹೋಗಿ ಬಿಎಸ್‌ಎನ್‌ಎಲ್ ವೈರ್ ಕತ್ತರಿಸಿ ಹಾಕಿದ ಎಡವಟ್ಟಿನಿಂದ ಇಡೀ ಗ್ರಾಮದ ಲ್ಯಾಂಡ್‌ಲೈನ್ ಫೋನ್ ಡೆಡ್ ಆಗಿ ಗ್ರಾಮಸ್ಥರು ಪರದಾಡುವಂತಾಗಿದೆ ಎಂಬ ಸುದ್ದಿಯಿಂದ ಮೊಬೈಲ್ ಇನ್ನೂ ಸಕಲರ ಕರಸ್ಥಳದಲ್ಲಿ ಇಂಬುಗೊಳ್ಳದಿದ್ದ ಆ ಕಾಲದಲ್ಲಿ ಲ್ಯಾಂಡ್‌ಲೈನ್ ಫೋನ್ ಎಷ್ಟೊಂದು ಮುಖ್ಯವಾಗಿತ್ತೆನ್ನುವುದು ಸ್ಮೃತಿಪಟಲದಲ್ಲಿ ಮೂಡಿತು.



ಚಾರಣ ಹೊರಟು, ಜತೆಗಾರರಿಂದ ತಪ್ಪಿಸಿಕೊಂಡು ಭಯ, ಆತಂಕದಲ್ಲೇ ಮೂರ್ನಾಲ್ಕು ದಿನ ಕಾಡುಮೇಡು ಅಲೆದು ಅದೃಷ್ಟವಶಾತ್ ಬದುಕಿ ಬಂದ ಚಾರಣಿಗ ಕೊಟ್ಟ ಕಾರಣ, ಕಾಲಿಗೆ ಹತ್ತಿದ ಜಿಗಣೆ ಕಿತ್ತು ಹಾಕಲು ಒಂದು ಕ್ಷಣ ಬಾಗಿದ ಎಡವಟ್ಟು. ಅಷ್ಟರಲ್ಲೇ ದಟ್ಟ ಮಂಜು ಮುಸುಕಿ ಮುಂದೆ ಏನೂ ಕಾಣದಂತಾಗಿ, ಜೋರಾಗಿ ಕಿರುಚಿಕೊಂಡರೂ ಧಾರಾಕಾರ ಮಳೆಯ ಸದ್ದು, ಪಕ್ಕದಲ್ಲೆ ಹರಿಯುತ್ತಿದ್ದ ನೀರಿನ ಭೋರ್ಗರೆತದಿಂದ ಕೂಗು ಜೊತೆಗಾರರಿಗೆ ಕೇಳಿಸದಂತಾಗಿ ಪ್ರಯೋಜನವಾಗಿರಲಿಲ್ಲ ಎನ್ನುವುದು ಚಾರಣಿಗರಿಗೆ ಎಚ್ಚರಿಕೆಯ ಗಂಟೆಯಾಗಿದೆ.

ಹೀಗೇ ಎಡವಟ್ಟನ್ನೇ ಅರಸುತ್ತಾ ಎಡವಟ್ಟಾಗಿ ಜೀವನ ಮುನ್ನಡೆಯುತ್ತಿದ್ದಾಗ ನನ್ನ ವೈಯಕ್ತಿಕ ಬದುಕಿನಲ್ಲಿ ಮರಿ ಎಡವಟ್ಟಾಗಮನದ ಲಕ್ಷಣಗಳು ಕಂಡುಬಂದವು. ಆಗೆಲ್ಲಾ ಖಾಸಗಿ ಆಸ್ಪತ್ರೆಗಳು ಅಷ್ಟೇನೂ ಸುಸಜ್ಜಿತವಾಗಿಲ್ಲದಿರುತ್ತಿದ್ದರಿಂದ ನನಗೆ ಟ್ರೀಟ್ ಮಾಡುತ್ತಿದ್ದ ಖಾಸಗಿ ಆಸ್ಪತ್ರೆಯ ಡಾಕ್ಟರ್ ನನ್ನನ್ನು ಜಿಲ್ಲಾ ಕೇಂದ್ರದ ಸರ್ಕಾರಿ ಆಸ್ಪತ್ರೆಗೆ ರೆಫರ್ ಮಾಡಿದರು. ಸಿಸೇರಿಯನ್ ಆಗಿ ಮಗು ಹುಟ್ಟಿದ ನಂತರ ನನ್ನ ಜೊತೆಗಿದ್ದ ನಮ್ಮಮ್ಮ ನರ್ಸ್ ಮಗುವನ್ನು ಎಲ್ಲಿ ಕರೆದುಕೊಂಡು ಹೋದರೂ ಜೊತೆಯಲ್ಲಿಯೇ ಹೋಗಿ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಿದ್ದರು. ಮಗು ಏನಾದರೂ ಅದಲು ಬದಲಾದರೆ ಎನ್ನುವುದೇ ಅವರ ಚಿಂತೆ. ಅಮ್ಮನ ಈ ಓವರ್ ಪ್ರೊಟೆಕ್ಷನ್ ಕೇರ್ ನೋಡಿ ನನಗೆ ಆಶ್ಚರ್ಯವಾಗುತ್ತಿತ್ತು. ಇತ್ತೀಚೆಗೆ ಪತ್ರಿಕೆಯಲ್ಲಿ ಬಂದ ಸುದ್ದಿ 'ಪ್ರತಿಷ್ಠಿತ ಆಸ್ಪತ್ರೆಯೊಂದರ ಸಿಬ್ಬಂದಿ ಎಡವಟ್ಟಿನಿಂದ ಮಗುವನ್ನು ಅದಲು ಬದಲು ಮಾಡಿದ್ದಾರೆ...' ಎನ್ನುವುದನ್ನು ನೋಡಿ ಗಾಬರಿ ಬೀಳುವಂತಾಯ್ತು. ಅಮ್ಮಾ ಅವಸರದಲ್ಲಿ ಎಡವಟ್ಟು ಕೆಲಸ ಮಾಡುವುದನ್ನು ಅಬಾದುಬಿ ಎನ್ನುತ್ತಾರಂತೆ. ಈ ಪದದ ಮೂಲ ಹಿಂದಿಯ 'ಅಪಾಧಾಪಿ'ಯಾಗಿದ್ದು, ಅದರ ಅರ್ಥ ಆಪತ್ತಿನ ಸಮಯದಲ್ಲಿ ದಿಕ್ಕು ತೋಚದೆ ಎತ್ತೆತ್ತಲೋ ಓಡಾಟ ಮಾಡುವುದೆಂದು ತಿಳಿದುಬಂದಿತು. ನಾನಿಂಥಾ ಅಬಾದುಬಿಗಳನ್ನು ಎಷ್ಟು ಮಾಡಿದ್ದೇನೆನ್ನುವುದಕ್ಕೆ ಲೆಕ್ಕವೇ ಇಲ್ಲ. ಅಮ್ಮ ಒಮ್ಮೆ 'ಬಚ್ಚಲಿಗೆ ನೀರು ಹುಯ್ಯಿ' ಎಂದು ಕೊಟ್ಟ ನೀರನ್ನು ಸ್ಕೂಲಿಗೆ ಹೋಗುವ ಆತುರದಲ್ಲಿ ನೇರವಾಗಿ ಹೋಗಿ ಉರೀತಿದ್ದ ಒಲೆಗೇ ಹುಯ್ದಿದ್ದೆ. ಮಳೆಗಾಲದಲ್ಲಿ ಹಸಿಸೌದೆಯನ್ನು ಒಂದು ಸಾರಿ ಹಚ್ಚೋದೇ ಕಷ್ಟ. ನನ್ನ ಅಬಾದುಬಿಯಿಂದ ಅಮ್ಮ ಪಾಡುಪಡುವಂತಾಯ್ತು.

ಸೀಮೆಎಣ್ಣೆ ದೀಪದ ಕಾಲವಾಗಿದ್ದ ಅಂದು ನಮ್ಮ ಮನೆಯಲ್ಲಿ ಒಂದು ಕಡೆ ಇಡಲು ಸ್ಟ್ಯಾಂಡ್ ದೀಪ, ಹಿಡಿದುಕೊಂಡು ಓಡಾಡಲು ಲಾಟೀನುಗಳಿದ್ದು. ಅವಕ್ಕೆ ಗಾಜಿನ ಚಿಮಣಿ ಹಾಕ್ತಿದ್ರು. ನಾನು ಆ ದೀಪ ಹಿಡಿದುಕೊಂಡಾಗಲೇ ಚಿಮಣಿ ಬಿದ್ದು ಒಡೆದುಹೋಗ್ತಿತ್ತು. ಗಾಜಿನ ಸೀಸಗಳನ್ನೂ ಹೀಗೇ ಗತಿ ಕಾಣಿಸುತ್ತಿದ್ದೆ. ಅದಕ್ಕೇ ನನಗೆ 'ಸೀಸ ಒಡೆದ ಬೂಸಣ್ಣಿ' ಎಂದೇ ಅಡ್ಡ ಹೆಸರಿಟ್ಟಿದ್ದರು. ಇದು ಹೀಗೇ ಮುಂದುವರೆದು ಕಾಲೇಜಿನಲ್ಲಿದ್ದಾಗ ಒಬ್ಬ ಕೆಮಿಸ್ಟ್ರಿ ಪ್ರೊಫೆಸರ್ ಕಂಡ್ರೆ ವಿನಾಕಾರಣ ನನಗೆ ತುಂಬಾ ಭಯವಾಗ್ತಿತ್ತು. ಲ್ಯಾಬ್‌ನಲ್ಲಿ ಟೈಟ್ರೇಷನ್ ಎಕ್ಸ್‌ಪೆರಿಮೆಂಟ್ ಮಾಡುವಾಗ ಅವರೇನಾದರೂ ಬಂದರೆ ಕೈಲಿ ಹಿಡಿದಿದ್ದ ಬ್ಯೂರೆಟ್ ಅನ್ನು ಹಾಗೇ ಬಿಟ್ಟು ಫೈನ್ ಕಟ್ಟುವಂತಾಗುತ್ತಿತ್ತು. ಒಂದು ಸಾರಿಯಂತೂ ಅವರು ಬಂದದ್ದೇ ಆ್ಯಸಿಡ್ ಅನ್ನು ಪಿಪೆಟ್ ಮಾಡುತ್ತಿದ್ದವಳು ಹಾಗೇ ಸೊರ್ರನೆ ಹೀರಿಕೊಂಡು ಕುಡಿದು ಅಧ್ವಾನವಾಗಿಹೋಗಿತ್ತು. ನನ್ನ ಈ ವೀಕ್‌ನೆಸ್ ಗಮನಿಸಿದ್ದ ನನ್ನ ಬ್ಯಾಚ್‌ಮೇಟ್‌ಗಳು 'ಪ್ರೊಫೆಸರ್ ಬಂದ್ರು' ಎಂದು ಹೇಳಿ ನಾನು



ಬೆಚ್ಚಿಬೀಳುವುದನ್ನು ನೋಡಿ ಮಜಾ ತೆಗೆದುಕೊಳ್ಳುತ್ತಿದ್ದರು. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ! ಮನೆಯಲ್ಲಿ ಚಿಮಣಿಗಳನ್ನು ಚೂರು ಮಾಡುತ್ತಿದ್ದಂತೆ ಆಗಾಗ ಟೆಸ್ಟ್‌ಟ್ಯೂಬ್, ಬೀಕರ್, ಫ್ಲಾಸ್ಕ್‌ಗಳನ್ನು ಒಡೆದು ಫೈನ್ ಕಟ್ಟುವುದು ಸರ್ವೇಸಾಮಾನ್ಯವಾಗಿ ಹೋಗಿತ್ತು. ಸದ್ಯ, ಅಲ್ಲಿ ಯಾರೂ ನನ್ನನ್ನು 'ಬೂಸಣ್ಣಿ' ಎಂದು ಕರೆಯುವವರು ಇರಲಿಲ್ಲ!

ಈ ಸಾಮಾನ್ಯ ಎಡವಟ್ಟುಗಳ ನಡುವೆ ಕೆಲವು ಮಹಾ ಎಡವಟ್ಟುಗಳೂ ಪದೇಪದೇ ಗಮನ ಸೆಳೆಯುತ್ತಿರುತ್ತವೆ!

ವಿದೇಶೀ ಧ್ವಜ ಇರುವ ರಾಕೆಟ್ ಬಳಸಿ ಜಾಹೀರಾತನ್ನು ನೀಡಿ ಫಜೀತಿ ಮಾಡಿಕೊಂಡದ್ದು, ಸುಳ್ಳು ಮಾಹಿತಿಗಳನ್ನೇ ನೀಡಿ ಪ್ರಪಂಚದೆಲ್ಲೆಡೆ ಕೊರೊನಾ ವೈರಸ್ ಹರಡಲು ಕಾರಣವಾಗಿದ್ದು, ಚಲನಚಿತ್ರದ ಪ್ರದರ್ಶನದ ವೇಳೆ ಥಿಯೇಟರ್ ಒಳಗೆ ಪಟಾಕಿ ಸಿಡಿಸಿದ ಫ್ಯಾನ್ಸ್‌ಗಳ ಅಡಾವುಡಿ ಇವೆಲ್ಲ ಕೆಲವು ಮಹಾ ಎಡವಟ್ಟುಗಳ ಝಲಕ್‌ಗಳಷ್ಟೆ! ಹಾಗಾದರೆ ನಾನಷ್ಟೇ ಅಲ್ಲ, ಮಹಾನ್ ಎನಿಸಿಕೊಂಡವುಗಳಿಂದಲೂ ಮಹಾ ಎಡವಟ್ಟುಗಳೇ ನಡೆಯುತ್ತದೆನ್ನುವುದೇ ಸಮಾಧಾನದ ಸಂಗತಿ.

ಮೊದಲೆಲ್ಲಾ ಪದೇಪದೇ ಎಡವಟ್ಟ ಎನಿಸಿಕೊಂಡು, ನಂತರ ಎಲ್ಲೆಲ್ಲಿಯೂ ಎಡವಟ್ ಸಮಾಚಾರಗಳನ್ನು ನೋಡಿ, ಕೇಳಿ ಕೆಟ್ಟಿದ್ದ ತಲೆಗೆ ಪುನೀತ್ ರಾಜ್‌ಕುಮಾರ್ ಅಭಿನಯದ 'ಜಾಕಿ' ಚಿತ್ರದ 'ಎಡವಟ್' ಹಾಡನ್ನು ಅಷ್ಟದಿಕ್ಕುಗಳಿಂದಲೂ ಕೇಳಿ ಕೇಳಿ, ಕೇಳಿದ್ದೆಲ್ಲವೂ ಎಡವಟ್ಟಾಗಿ ಕಡೆಗೆ ಮುಳ್ಳಿನಿಂದಲೇ ಮುಳ್ಳನ್ನು ತೆಗೆಯುವಂತೆ ಎಡವಟ್ಟೇ ತಲೆಯಿಂದ ಎರೇಸ್ ಆಗಲು ಸಹಕಾರಿಯಾಯ್ತು. ಇನ್ನು ಈ ಎಡವಟ್ ಸಹವಾಸವೇ ಬೇಡ ಎಂದುಕೊಳ್ಳುವಾಗಲೇ ನಮ್ಮ ತಂದೆ ಸದಾ ನನಗೆ ಹೇಳುತ್ತಿದ್ದ 'ಯಾಕಮ್ಮ ಇಷ್ಟೊಂದು ಆಭಾಸ ಮಾಡ್ತೀಯ' ಎನ್ನುವ ಮಾತು ಕೊರೆಯಲಾರಂಭಿಸಿ, ಆಭಾಸದ ಅನ್ವೇಷಣೆಯಲ್ಲಿ ತೊಡಗಿದೆ. 'ಆಭಾಸ' ಎಂದರೆ ಅಧ್ವಾನ, ಗೊಂದಲ, ನಗೆಪಾಟಲು, ಪ್ರಮಾದ, ತಪ್ಪು ತಿಳಿವಳಿಕೆ, ಎಡವಟ್ಟು... ಓಹೋ ಮತ್ತೆ ಎಡವಟ್ಟು! ಎಡವಟ್ಟಿನ ಅರ್ಥವ್ಯಾಪ್ತಿಯಲ್ಲಿ 'ಆಭಾಸ' ವಿರಲಿಲ್ಲ. ಆಭಾಸದಲ್ಲಿ ಎಡವಟ್ಟೂ ಸೇರಿದೆಯೆಂದರೆ ನಮ್ಮ ತಂದೆಯೂ ನನ್ನನ್ನು ಸುಸಂಸ್ಕೃತವಾಗಿ ಎಡವಟ್ಟ ಅಂತಲೇ ಕರೆಯುತ್ತಿದ್ದರಾ?

ನಮ್ಮ ಕನ್ನಡ ಭಾಷೆಯ ಉಚ್ಚಾರ, ಬರವಣಿಗೆ ಹಾಗೂ ಇತ್ತೀಚಿನ ಗೂಗಲ್ ಟ್ರಾನ್ಸ್‌ಲೇಷನ್‌ನಲ್ಲಿನ ಅಕ್ಷರ/ಪದಗಳ ಪ್ರಯೋಗ, ಸಾರ್ವಜನಿಕ ಕ್ಷೇತ್ರದಲ್ಲಿನ ಘಟನಾವಳಿಗಳು ಎಲ್ಲೆಡೆಯಲ್ಲೂ ನಡೆಯುತ್ತಿರುವ ಈ ಆಭಾಸಕ್ಕೆ ಕೊನೆ ಮೊದಲೇ ಇಲ್ಲ. ಈಗೀಗ ಎಡವಟ್ಟಿನಿಂದ ಹೇಗೋ ಪಾರಾಗಿದ್ದಾಗಿದೆ. ಸದ್ಯದಲ್ಲಿ ವಿಶ್ರಮಿಸಿ ನಂತರ ನನ್ನ ಹಾಗೂ ನನ್ನಂಥಾ ಆಭಾಸಿಗಳ ಬಗ್ಗೆ ಹೇಳಹೊರಟರೆ ಆಭಾಸವಾಗುವುದಿಲ್ಲ ತಾನೆ!

**ಪ್ರತಿಕ್ರಿಯಿಸಿ: feedback@sudha.co.in**